(9) ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡಿಪ್ಯೂಟಿ ಕಮಿಷನರಿ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡಿಪ್ಯೂಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮಂಜೂರಾದ 15 ದಿವಸಗಳಲ್ಲಿ ಇಜಾರೆದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಇದರಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜವಾಬಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆಯನ್ನ ರದ್ದುಮಾಡಲಾಗುತ್ತದೆ. ಮತ್ತು ಅದುವರಿಗೆ ಕೊಟ್ಟ ಹಣವು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತದೆ. ಮತ್ತು ಬಾಬನ್ನು ದುಸರಾ ಹರಾಜು ಮಾಡಲಾಗುತ್ತೆ.

15ನೆ ಜುಲೈ 1909ರಲ್ಲಿ ಅಥವಾ ಅದಕ್ಕೆ ಮುಂಚೆ.

ಇತರ ಷರತ್ತುಗಳು.

(I) ಇಜಾರೆದಾರನ ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಕಿ ಕಂಟ್ರಾಕ್ಟರೇ ಆಗಲಿ ಬಂದು ವರುಷದೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜವಾಬಣಿ ನಡೆಯುವ ಅಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಕಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಬಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡಿಪ್ಯೂಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಷಯ ಸಾದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ವೇರಿಗೆ ರವ್ವು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಕ್ಕಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡಿಪ್ಯೂಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಂಡಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆಯುಂಟುದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬಳಿಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1910ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜವಾಬಣೇ ಮಾಡಿ ದಾಸ್ತಾನ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರವ್ವು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜವಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡಿಪ್ಯೂಟಿ ಕಮಿಷನರ್ ಸಾಹೇಬರು 1,000 ರೂಪಾಯಿ ವರೆವಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಜೆ. ರಾಮರಾವ್,
ಫಾರ್ ಡಿಪ್ಯೂಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 1ನೆ ಮೇ 1909.

ಸ್ ೧೯೦೦ನೆ ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನೆಂದರೆ,—ಈ ಕೆಳಗೆ ಕಾಣಿಸಿರುವ ತಪ್ಪಲಿನಂತೆ ನಾಟಾಗಳು ಚನ್ನಗಿರಿ ರೇಂಜ್ ಅತ್ತಿಗುಂದಾ ಮತ್ತು ಮಿಲ್‌ಕೆರೆ ಡಿಸ್ಟ್ರಿಕ್ಟ್ ಜಂಗಲ್‌ನಲ್ಲಿ ಸಿಕ್ಕಿ ಇರುತ್ತವೆ.

ಈ ನಾಟಾಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಏಜಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳ ಒಳಗೆ ಶಿವಮೊಗ್ಗ ಡಿಸ್ಟ್ರಿಕ್ಟ್

ಫಾರೆಸ್ಟ್ ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ನಾಟಾಗಳನ್ನು ಸರ್ಕಾರಕ್ಕೆ ಕೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ.

ನಂಬರ್.	ಜಾತಿ.	ಲಾಂಬಿ		ಸುತ್ತಳತ್ತೆ		ಷರಾ.
		ಅಡಿ.	ಅಂ.	ಅಡಿ.	ಅಂ.	
1	ತ್ಯಾಗ ...	11	3	3	0	ಅತ್ತಿಗುಂದದ ಪಟೇಲ್ ಜನ್ನಪ್ಪನ ಸ್ವಾಧೀನದಲ್ಲಿದೆ.
2	ಡಿಟೋ ...	11	3	3	7	
3	ಡಿಟೋ ...	12	3	2	9	
4	ಡಿಟೋ ...	18	9	2	5	
5	ಡಿಟೋ ...	11	3	3	0	
6	ಡಿಟೋ ...	13	9	2	10	
7	ಡಿಟೋ ...	23	2	2	8	
8	ಡಿಟೋ ...	9	0	4	0	

ಇಸ್ತಿಹಾರ್ನಾಮಾ, ತಾರೀಖು 17ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ಡಿಪೋಗಳಲ್ಲಿ ಕೆಳಗೆ ನಮೂದಿರುವ ನಾಟಾಗಳನ್ನು ಸದರಿ ಡಿಪೋಗಳ ಬಾಜೂದಲ್ಲಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಲಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದಾಗಲೀ ಹರಾಜು ಮಾಡಲ್ಪಡುತ್ತವೆ.

ಡಿಪೋ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.		ಮೊತ್ತ.	ಷರಾ.
				ನಂಬರು.	
ಶಿವಮೊಗ್ಗ ...	9ನೆ ಜೂ॥ 1909 ...	(1)	ಸಾಗುವಾನಿ ನಾಟಾ ...	80	ಹೆಚ್ಚಿನ ಕಡಿನೆ.
		(2)	ಮನ್ನಾಜಾತಿ ನಾಟಾ ...	100	
		(3)	ಮತ್ತಿ ನಾಟಾ ...	100	
		(4)	ಕಾಡುಜಾತಿ ನಾಟಾ ...	100	
		(5)	ಸಾಗುವಾನಿ ಬೆಲಗು ...	100	
		(6)	ಕಾಡುಜಾತಿ ಬೆಲಗು ...	100	
		(7)	ಬೀಟೆ ...	50	
		(8)	ನಂದಿ ...	100	
				ಸಲೆ ಅಡಿ.	
ಬೆಂಕಿಪುರ ...	7ನೆ ಜೂ॥ 1909 ...	(1)	ಮತ್ತಿ ...	1,500	ಹೆಚ್ಚಿನ ಕಡಿನೆ.
		(2)	ಹೊನ್ನೆ ...	1,500	
		(3)	ಸಾಗುವಾನಿ ...	500	
		(4)	ಯತ್ತಿಗ ...	500	
		(5)	ಹುನಾಲ್ ...	500	
		(6)	ಬೀಟೆ ...	300	

ಹರಾಜು ಷರತ್ತುಗಳು.

ಚಡ ದರಖಾಸ್ತುದಾರನು ಹರಾಜ್ ಆದ 5 (ಐದು) ದಿವಸಗಳೊಳಗಾಗಿ ಹರಾಜ್ ಮೊಬಲಗು ಪೈಕಿ ಕೇಕಡ 25ರಂತೆ ಆಗುವ ಮೊಬಲಗನ್ನು ಹತ್ತರಿರುವ ಖಜಾನೆಗೆ ಕಟ್ಟುತಕ್ಕದ್ದು. ಹಾಗೆಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜ್ ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಜೂ॥ ತಾರೀಖು 25ರ ಒಳಗಾಗಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಮೊದಲು ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತ್ತು ಪೂರಾ ಪಾವತಿ ಮಾಡದೆಯೂ ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜ್ ತಾರೀಖು ಲಾಗಾಯಿತು 90 ದಿವಸಗಳ ವೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ ಬಂದಕ್ಕೆ ಕೇಕಡ ಬಂದಕ್ಕೆ 12 ರೂಪಾಯಿನಮೇರೆ ಡಿಪೋ ಬಾಡಿಗೆ ವಸೂಲ್ಮಾಡಲಾಗುತ್ತೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಶಿವಮೊಗ್ಗ ಡಿಸ್ಟ್ರಿಕ್ಟ್.

ನೋಟಿಫಿಕೇಷ್ಣ.

ತಾರೀಖು 13ನೆ ಮೇ 1909.

ಸ॥ 1909ನೆ ಇಸವಿ ಮೇ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 393ನೆ ಪೇಜುಗಳಲ್ಲಿ ತುಮಕೂರು ಫಾರೆಸ್ಟ್ ಡಿಪೋದಲ್ಲಿರುವ ಅಳಲೆಕಾಯನ್ನು ಮತ್ತು ಮದ್ದಗಿರಿ ತಾಲ್ಲೂಕು ಮತ್ತು ಕೊರಟಗೆರೆ ಸಬ್ ತಾಲ್ಲೂಕುಗಳ ಬಾಬತು 1909—1910 ಮತ್ತು 1910—11ನೆ ಇಸವಿಗಳಲ್ಲಿ ತಂಗಡಿ ಮತ್ತು ಕಕ್ಕೆಚಕ್ಕೆ ಜಮಾಯಿಸಿಕೊಳ್ಳುವ ಹಕ್ಕನ್ನು ಸಹಾ ಜೂ॥ 8ನೆ ತಾರೀಖಿನಲ್ಲಿ ಹರಾಜು ಮಾಡುವದಾಗಿ ಘಾಯಿಷ್ಣಾಗಿರುತ್ತೆ.

ಹೆಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟ್.

ನೋಟಿಫಿಕೇಷ್ಣ, ತಾರೀಖು 8ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಡೂರು ಡಿಸ್ಟ್ರಿಕ್ಟ್ ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟಾಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರ್.	ನಾಟಾಗಳ ವಿವರ.	ಶಿವಮೊಗ್ಗ ಡಿಪೋ 27ನೆ ಮೇ 09.		ಬೆಂಕೀಪುರ ಡಿಪೋ 29ನೆ ಮೇ 09.		ತರೀಕೆರೆ ಡಿಪೋ 31ನೆ ಮೇ 09.		ಕಡೂರು ಡಿಪೋ 2ನೆ ಜೂ॥ 09.		ಷರ.
		ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	
1	ಸಾಗುವಾನಿ ...	...	...	...		50	2,000	275	600	ಹೆಚ್ಚಿನ ಕಡಿತ.
2	ಹೊನ್ನೆ ...	...	...	50	1,500	20	500	20	500	
3	ಬೀಟೆ ...	..	...	20	500	80	2,000	10	200	
4	ಮತ್ತಿ ...	10	200	90	2,500	80	2,000	65	1,500	
5	ನಂದಿ ...	20	500	25	800	25	700	...	...	
6	ಹುನಾಲು ...	25	1,000	50	1,300	120	3,000	...	...	
7	ಬಿಲ್ವಾರ ...	...	...	...	...	1	10	...	...	
8	ಯತ್ತಾಗ ...	20	600	30	800	20	500	...	...	
9	ತಡಸಲು ...	2	60	...	...	10	200	...	...	
10	ಬಾಗೆ ...	...	...	...	...	...	...	...	...	
11	ಜಂಬೆ ...	15	350	15	300	60	900	...	...	
12	ಸಾಗುವಾನಿ ತೀರು ...	...	...	...	....	2,164	1,680	...	...	
13	ಡಿಟೋ ಪರೋಡೆ ...	...	...	...	...	43	30	...	...	
14	ಡಿಟೋ ರಿಪೀಸು ...	...	...	...	...	...	...	...	...	
15	ಮಸಿ ...	...	...	1	23	5	150	...	...	
16	ನೇರಲು ...	...	...	10	200	5	100	...	...	
17	ಕಿರಾಲು ಭೋಗಿ ...	...	...	...	...	31	300	...	...	

ಹರಾಜು ಷರತ್ತುಗಳು.

(1) ಖಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಖು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲೆ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾ ಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲೆ ಹರಾಜುದಾರನಿಂದ ವಸೂಲು ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡೆದಿರುವ ನಾಟಾ ಕಿವ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90) ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋದಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ 12 ರೂಪಾಯಿ ನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹೀರಾಸಿಂಗ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲು ಪೇಟೆ ತಾಲ್ಲೂಕಿನಲ್ಲಿರುವ ಹೆಗ್ಗವಾಡಿ ಬ್ಲಾಕ್ I‌ನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ॥ 1909‌ನೆ ಇಸವಿ ಮೇ ತಾರೀಖು 20‌ನೆ ಮೈಸೂರು ಗೆಜೆಟ್ಟಿನ 2‌ನೆ ಭಾಗದ 395, 396‌ನೆ ಪೇಜಿನಲ್ಲಿ ವಿಕದವಾಗಿ ವಿವರಿಸಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲು ಪೇಟೆ ಮತ್ತು ಚಾಮರಾಜನಗರ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ್ II‌ನೆ ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ॥ 1909‌ನೆ ಇಸವಿ ಮೇ ತಾರೀಖು 20‌ನೆ ಮೈಸೂರು ಗೆಜೆಟ್ 2‌ನೆ ಭಾಗದ 396, 397‌ನೆ ಪೇಜಿನಲ್ಲಿ ವಿಕದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್, ಫಾರೆಸ್ಟ್ಸ್ ಸೆಟ್ಲ್‌ಮೆಂಟ್ ಆಫಿಸರ್ ಇ॥ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.
ನೋಟಿಫಿಕೇಷ್ನ್.

ತಾರೀಖು 30‌ನೆ ಏಪ್ರಿಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನಂಬುವನು ಬುರ್ಡಸಾಬಿ ಹತ್ತಲಿನಲ್ಲಿ ಅಗಿಯುತ್ತಿರುವಾಗ ಒಂದು ಸಂಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರರಾಗಿದ್ದಪಕ್ಷದಲ್ಲಿ ಈ ನೋಟಿಫಿಕೇಷ್ನ ಗೆಜೆಟ್ಟಿನಲ್ಲಿ ಪ್ರಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ "ಟ್ರೆಜರ್‌ಟ್ರವ್" ರೂಲ್ಸ್ 5‌ನೆ ಸೆಕ್ಷ್ನ್ ಅನುಸರಿಸಿ ವಿಲೆ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರ್ಣ ಬಣ್ಣ ಭಂಗಾರದ ಬೆಂಡುವಾಲೆ ಜೊತೆ 1‌ಕ್ಕೆ ತೂಕ 1 ವರಹ 3 ಹಣ.
ವರಹಬಣ್ಣ ಭಂಗಾರದ ತಾಳಿಗಳು 7‌ಕ್ಕೆ ತೂಕ $1\frac{3}{4}$ ವರಹ.
ಕಣಬಣ್ಣ ಭಂಗಾರದ ಗಟ್ಟು 1‌ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.
ಇ ಸ್ಟೆ ಹಾ ರ್.

ತಾರೀಖು 22‌ನೆ ಏಪ್ರಿಲ್ 1909‌ನೆ ಇಸವಿ.

ಸ॥ 1909‌ನೆ ಇಸವಿ ಜುಲೈ ಮೊಹೆ ತಾರೀಖು 1ರ ಲಾಗಾಯಿತು 1910‌ನೆ ಇಸವಿ ಜೂ॥ ಮೊಹೆ ತಾರೀಖು 30ರ ವರಿಗೆ ಈ ಕೆಳಗೆ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನುವಾರುಗಳು ವಗೈರೆಗಳ ಮೇಲೆ, ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷ್ನ 78 ಮತ್ತು 79‌ನೆ ಸೆಕ್ಷ್ನ್‌ಗಳಲ್ಲಿ ನಮೂದಿಸುವ ಪ್ರಕಾರ ಸುಂಕ ವಸೂಲು ಮಾಡಲಿಕ್ಕೆ ಮೈಸೂರು ಸಿಟಿ ಮ್ಯುನಿಸಿಪಲ್ ಕಮಿಷನರ್ ಸಾಹೇಬರವರು ಹುಕುಮು ಮಾಡಿರುತ್ತಾರೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ಮಾಹೆ ತಾರೀಖು ನಿಸಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಸೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲೀ ಅಥವಾ ಮತ್ಯಾವ ದರವನ್ನೇ ಆಗಲಿ ಮುಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10‌ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪರತ್ತುಗಳ ಪ್ರಕಾರ ಕಂಟ್ರಾಕ್ಟು ನಡದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ದರಖಾಸ್ತುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲುಗೇಟುಗಳ ಮುಖಾಂತರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನುವಾರುಗಳು ಇವುಗಳ ಮೇಲೆ ವಸೂಲಾದ ಟೋಲುದಾನೆ ಸುಂಕ ಇವುಗಳ ತಪಸೀಲು ತೋರಿಸುವ ಲೆಖ್ಕವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್‌ಸ್ಪೆಕ್ಷ್ನ ಬಗ್ಗೆ ಹಾಜರ್ಮಾಡಬೇಕು ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಕಗಳನ್ನು ಅವರ ಇನ್‌ಸ್ಪೆಕ್ಷ್ನ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲುಗಳ ಲೆಖ್ಕವನ್ನು 6‌ನೆ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟ್‌ದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟನಲ್ಲಿಯೂ ಒಬ್ಬೊಬ್ಬ ಮುತ್ಸದ್ದಿಯನ್ನು ಇಡವದಕ್ಕೆ ಬದ್ಧನಾಗಿರತಕ್ಕದ್ದು.